ನಿಷ್ಪಕ್ಷಪಾತವಾಗಿ ತನಿಖೆಯಾಗುತ್ತದೆಂದು ಜನ ಸಮಾಧಾನವಾಗಿದ್ದರು. ಆದರೆ ಅಲ್ಲಿ ಮತ್ತೆ ಯಾವಾಗ ಒತ್ತಡ ಬಂತು, ಕೆಲವರು ಅಲ್ಲಿ strike ಮಾಡಿದರು, ಅವರನ್ನು ಮತ್ತೇ ಅಲ್ಲಿ ಹಾಕಿದರು. ಅವನ ಹೇಳಿಕೆ ನೋಡಿ, ಅದು ಒಬ್ಬ ಪೊಲೀಸ್ ಅಧಿಕಾರಿ ಕೊಡುವಂತಹ ಹೇಳಿಕೆಯಲ್ಲ. ನಿಮ್ಮ ಪೊಲೀಸ್ ಅಧಿಕಾರಿಗಳೇ demoralize ಆಗಿದ್ದಾರೆ. ಇಂತಹ ಹಿರಿಯ ಅಧಿಕಾರಿಗಳನ್ನು ನೀವು ಅಲ್ಲಿಯೇ ಮುಂದುವರೆಸಿದರೆ, ಪೊಲೀಸ್ ಇಲಾಖೆಯಲ್ಲಿ ವ್ಯವಸ್ಥೆ ಇನ್ನೂ ಕೆಟ್ಟು ಹೋಗುತ್ತದೆ, demoralize ಆಗುತ್ತಾರೆ. ಅದಕ್ಕೆ ನಾನು ಒತ್ತಾಯ ಮಾಡುವುದೇನೆಂದರೆ ಅವರನ್ನು ವರ್ಗಾವಣೆ ಮಾಡಿ ಇದನ್ನು ಸಿ.ಬಿ.ಐ ತನಿಖೆಗೆ ಕೊಡಬೇಕೆಂದು ಹೇಳುತ್ತೀದ್ದೇನೆ. ಇವರನ್ನು custody ಗೆ ಕೊಡಬೇಕಾಗುತ್ತದೆ, ಇಲ್ಲದಿದ್ದರೆ ನಾವು ಇದನ್ನು ಬಿಡುವುದಿಲ್ಲ.

ಅಧ್ಯಕ್ಷರು:– ಜಗದೀಶ್ ಶೆಟ್ಟರ್‌ರವರೇ, ಆಯಿತು, ಎಲ್ಲಾ ಮುಗಿಯಿತು. No, discussıon, ರಾಯರೆಡ್ಡಿಯವರೆ, ತಾವು move ಮಾಡಿ. ಆಯಿತು, ಬಿಡಬೇಡಿ, ಹಿಡಿದುಕೊಳ್ಳಿ.

ಶ್ರೀ ಬಿ.ಆರ್. ಪಾಟೀಲ್: ಅಲ್ಲಿ ಎಸ್‌ಪಿ ಇರಲಿಲ್ಲ, ಡಿ.ಸಿ. ಇರಲಿಲ್ಲ.

7. ರಾಜ್ಯಪಾಲರ ಭಾಷಣಕ್ಕೆ ವಂದನಾರ್ಪಣೆ ಪ್ರಸ್ತಾವದ ಮಂಡನೆ ಮತ್ತು ಅನುಮೋದನೆ:–

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗಾ):– ಮಾನ್ಯ ಅಧ್ಯಕ್ಷರೆ, "2014ರ ಜನವರಿ 22 ರಂದು ವಿಧಾನಮಂಡಲದ ಉಭಯ ಸದನಗಳ ಸದಸ್ಯರನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನಸಭೆಯ ಸದಸ್ಯರಾದ ನಾವು ಘನತೆವೆತ್ತ ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇವೆ"

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್:– ನೀವು ರಾಜಕೀಯ ಮಾಡುವುದಾದರೆ ಮಾಡಿ. ನಿಮಗೆ ಬೇರೆ ಯಾವುದೇ issue ಇಲ್ಲ.

(ಗೊಂದಲ)

ಅಧ್ಯಕ್ಷರು:– ದಯವಿಟ್ಟು ಇಲ್ಲಿ ಯಾರೂ ಏನೂ ಹೇಳಿದರೂ ಕಡತದಲ್ಲಿ ಹೋಗುವುದಿಲ್ಲ.

(ಮಾನ್ಯ ಸಭಾಧ್ಯಕ್ಷರ ಆದೇಶದಂತೆ ದಾಖಲು ಮಾಡಲಿಲ್ಲ)

(ಗೊಂದಲ)

ಅಧ್ಯಕ್ಷರು:– ಮಾನ್ಯ ರಾಜ್ಯಪಾಲರ ವಂದನಾ ನಿರ್ಣಯವನ್ನು move ಮಾಡಿದ್ದಾರೆ, ಅದನ್ನು ಶಿವಮೂರ್ತಿಯವರೆ, ತಾವು ಸೆಕೆಂಡ್ ಮಾಡಿ.

ಶ್ರೀ ಕೆ. ಶಿವಮೂರ್ತಿ (ಮಾಯಕೊಂಡ):– ಮಾನ್ಯ ಅಧ್ಯಕ್ಷರೆ, ದಿನಾಂಕ 22ನೇ ಜನವರಿಯಂದು ಮಾನ್ಯ ರಾಜ್ಯಪಾಲರು ವಿಧಾನಮಂಡಲದ ಸದಸ್ಯರನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕೆ ಕೃತಜ್ಞತಾಪೂರ್ವಕ ವಂದನೆಗಳನ್ನು ಸಮರ್ಪಿಸಲು ಮಾನ್ಯ ಬಸವರಾಜ ರಾಯರೆಡ್ಡಿಯವರು ಮಂಡಿಸಿದ ನಿರ್ಣಯವನ್ನು ನಾನು ಅನುಮೋದಿಸುತ್ತೇನೆ.

ಅಧ್ಯಕ್ಷರು:– ಪ್ರಸ್ತಾವವನ್ನು ಮಂಡಿಸಲಾಯಿತು.

(ಗೊಂದಲ)

ಅಧ್ಯಕ್ಷರು:– ದಯವಿಟ್ಟು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಆಮೇಲೆ ಮಾತನಾಡಿ. ನಾನೂ ಮಾತನಾಡುತ್ತೇನೆ.